

ಮನುಷ್ಯರ ಕಣ್ಣಿಗೆ ಸುಂದರ ಎನ್ನಿಸುವವರು ಸಾಮಾನ್ಯವಾಗಿ ಸಮಪ್ರಮಾಣದ ಅಂಗಾಂಗಗಳನ್ನು ಹೊಂದಿರುತ್ತಾರೆ. ಆದರೆ, ಸಂಪೂರ್ಣ ಸಮಪ್ರಮಾಣ ಎನ್ನುವುದು ಸೃಷ್ಟಿಯಲ್ಲಿಲ್ಲ. ಅಂತೆಯೇ ಹೆಂಗಸರ ಸ್ತನಗಳ ನಡುವೆ ಕೂಡ ವ್ಯತ್ಯಾಸವಿರುತ್ತದೆ. ಅವೆರಡೂ ಸಂಪೂರ್ಣ ಸಮಪ್ರಮಾಣದಲ್ಲಿರದೇ ಹೋಗಬಹುದು. ವಯಸ್ಸಾದಂತೆಲ್ಲ ಸ್ತನಗಳ ಆಳತೆಯೂ ಬದಲಾಗುತ್ತ ಹೋಗುತ್ತದೆ. ಇದು ಕೂಡ ಸಹಜ. ಆದರೆ, ಕೆಲವೊಂದು ಸ್ತನ ಬದಲಾವಣೆಗಳ ಬಗ್ಗೆ ಅರಿವಿರಬೇಕು. ಅವುಗಳನ್ನು ಆಗಾಗ ಪರೀಕ್ಷಿಸಿಕೊಳ್ಳಬೇಕು. ಯಾವ ಬಗೆಯ ಕಾಯಿಲೆಗಳು ಸ್ತನಗಳಿಗೆ ಬರಬಹುದು ಎಂದು ತಿಳಿದಿರಬೇಕು. ಹೇಗೆ ಪರೀಕ್ಷಿಸಿಕೊಳ್ಳಬೇಕು ಎಂದು ಗೊತ್ತಿರಬೇಕು. ಮಹಿಳೆಯರಲ್ಲಿ ಸ್ತನ ಕ್ಯಾನ್ಸರ್ ವ್ಯಾಪಕವಾಗುತ್ತಿರುವ ಹಿನ್ನೆಲೆಯಲ್ಲಿ ಸ್ತನಗಳ ಕುರಿತ ಈ ಕಥನ ಮಹಿಳೆಯರ ಈ ಅಂಗದ ಬಗ್ಗೆ ಸ್ಥೂಲ ಹಾಗೂ ವೈಜ್ಞಾನಿಕ ವಿಚಾರಗಳನ್ನು ಸ್ಫುಟವಾಗಿ ತಿಳಿಸುವಂತಿದೆ. ಇದು ಈ ವಾರದ ಸುಧಾ ವಿಶೇಷ.

■ ಡಾ. ಪ್ರೇಮಲತ ಬಿ.



# ಶ್! ಸ್ತನ ಕಥನ

## ಮಾತಾಡದ ವಿಷಯ